# ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ , ಕಾರವಾರ

ಸಿ.ಸಿ. ನಂಃ 140-2014 ಪಿ.ಡಬ್ಲ್ಯೂಃ 7

ಸಿ ಡಬ್ಲೂಃ 6

ಸಾಕ್ಷಿದಾರರ ಹೆಸರು : ಸಂತೋಷ್

ತಂದೆಯ ಹೆಸರು : ಕಮಲಾಕರ್ ರೇವಣಕರ್

ವಯಸ್ಸು : 44 ವರ್ಷ

ಉದ್ಯೋಗ : ಅಕ್ಕಸಾಲಿಗ

ವಾಸ್ತವ್ಯ : ದಾಂಡೇಲಿ

ಸತ್ಯ ಪ್ರತಿಜ್ಞೆಯ ಮೇರೆಗೆ ದಿನಾಂಕಃ 15-09-2022.

## ಮುಖ್ಯ ವಿಚಾರಣೆಃ ಎಪಿಪಿಯವರಿಂದಃ

ದಿಃ 01-12-2008 ರಂದು ಚಿತ್ತಾಕುಲ ಪೋಲಿಸ್ ಠಾಣೆಯವರು ನನ್ನನ್ನು ಕರೆದು ಬಂಗಾರದ ನೈಜತೆಯ ಪರಿಶೀಲನೆ ಮಾಡಬೇಕಾಗಿ ನನ್ನನ್ನು ಕೇಳಿಕೊಂಡರು . ದಿಃ 02-12-2008 ರಂದು ಮುಂಡಗೋಡಕ್ಕೆ ಹೋಗಿ ಪೂನಂ ಜ್ಯುವೇಲರ್ಸ ನಲ್ಲಿ ಹಾಜರು ಪಡಿಸಿದ ಬಂಗಾರದ ನೆಕ್ಲೇಸ್ 20 ಗ್ರಾಂ , ಬಂಗಾರದ ಕಿವಿ ಓಲೆ 10 ಗ್ರಾಂ , ಇನ್ನೊಂದು ಬಂಗಾರದ ಕಿವಿ ಓಲೆ 10 ಗ್ರಾಂ , 1 ಉಂಗುರ 5 ಗ್ರಾಂ , ಒಟ್ಟು 45 ಗ್ರಾಂ ಹಾಜರು ಪಡಿಸಿದ್ದನ್ನು ನಾನು ಪರಿಶೀಲನೆ ಮಾಡಿ ಅದರ ಬೆಲೆಯನ್ನು ಅಂದಾಜು 54,000/- ರೂಗಳು ಎಂದು ಹೇಳಿರುತ್ತೇನೆ . ಬಂಗಾರವನ್ನು ನೋಡಿದರೆ ಗುರುತಿಸುತ್ತೇನೆ .

## ಪಾಟೀ ಸವಾಲುಃ ಶ್ರೀ ಪಿ ಬಿ ಟಿ ವಕೀಲರಿಂದಃ

ನಾನು ಅಕ್ಕಸಾಲಿಗ ಎಂದು ಹೇಳಲು ನಮಗೆ ಯಾವುದೇ ಪ್ರಮಾಣ ಪತ್ರ ಇರುವುದಿಲ್ಲ . ಪೋಲಿಸರು ನನಗೆ ಯಾವುದೇ ನೋಟಿಸ್ ಅನ್ನು ನೀಡಿಲ್ಲ . ಪೋಲಿಸ್ ಠಾಣೆಗೆ ಹೋಗಿಲ್ಲ ಎಂದರೆ ಸರಿಯಲ್ಲ . ಯಾವುದೇ ಚೀಲದ ಪರಿಶೀಲನೆ ಮಾಡಿಲ್ಲ ಎಂದರೆ ಸರಿಯಲ್ಲ . ಅಕ್ಕಸಾಲಿಗನಾಗಿ ನನಗೆ ಯಾವುದೇ ತರಬೇತಿ ಇಲ್ಲದೇ ಇದ್ದರೂ ಸಹ ಬಂಗಾರವನ್ನು ಪರಿಶೀಲನೆ ಮಾಡಿ ಸುಳ್ಳು ಹೇಳಿಕೆ ನೀಡಿದ್ದೇನೆ ಎಂದರೆ ಸರಿಯಲ್ಲ . ಪೋಲಿಸರಿಗೆ ಯಾವುದೇ ಹೇಳಿಕೆ ನೀಡಿಲ್ಲ .

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಗಣಕೀಕೃತ ಮಾಡಿಸಲಾಯಿತು.**

**ಓ. ಹೇ.ಕೇ. ಸರಿ ಇದೆ.**

**C/c ಹೆ .ದ.ನ್ಯಾದಂ. ಕಾರವಾರ**